ಸಿ.ಸಿ ನಂಬ್ರ: 399/2023
ಪಿ.ಡಬ್ಲ್ಯೂ : 1

ದಿನಾಂಕ: 12-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

1. ನಾನು ಮೋಹನ್ ಖಾರ್ವಿಯವರ ವಿರುದ್ಧ ಮತ್ತೊಂದು ಪ್ರಕರಣದಲ್ಲಿ ಸಾಕ್ಷಿ ಹೇಳಿರುತ್ತೇನೆ. ಆ ಪ್ರಕರಣ ಸಂಖ್ಯೆ 603/2023. ಆ ಪ್ರಕರಣ ಈಗಾಗಲೇ ತೀರ್ಪು ಆಗಿರುತ್ತದೆ. ಆ ಪ್ರಕರಣದ ಸಂಖ್ಯೆ 595/2023 ಎಂದರೆ ಸರಿಯಲ್ಲ. ಆ ಪ್ರಕರಣ ಜನವರಿ 10 ಕ್ಕೆ ತೀರ್ಪಾಗಿರುತ್ತದೆ ಎಂದರೆ ಸಾಕ್ಷಿ ಆ ಪ್ರಕರಣ ನಮ್ಮದಲ್ಲ ಎಂದು ನುಡಿಯುತ್ತಾರೆ. ನಾನು ಸಾಕ್ಷಿ ಹೇಳಿರುತ್ತೇನೆ. ನಾನು ಈ ಪ್ರಕರಣದ ಆರೋಪಿತನ ವಿರುದ್ಧ ಆ ಪ್ರಕರಣದಲ್ಲಿ ಸಾಕ್ಷಿ ಹೇಳಿರುತ್ತೇನೆ. ಆ ಕೇಸಿನ ಪ್ರಕರಣ ಸಂಖ್ಯೆ 595/2023 ಎಂದರೆ ಸರಿಯಲ್ಲ. ಸಾಕ್ಷಿ 603/2023 ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಿದ ಪ್ರಕರಣ ಚೆಕ್ ಅಮಾನೀಕರಣ ಪ್ರಕರಣ ಆಗಿರುತ್ತದೆ.

2. ನಾನು ಆ ಪ್ರಕರಣದಲ್ಲಿ ಏಕೈಕ ಸಾಕ್ಷಿಯಾಗಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿ ಚೆಕ್ ನ ಮೊತ್ತ 9,71,476/- ರೂ. ಆ ಸಮಯದಲ್ಲಿ ನಾನು ಪರ್ಶಿನ್ ಮೀನುಗಾರ ಸ್ವ ಸ್ವಹಾಯ ಸಂಘ ಗಂಗೊಳ್ಳಿ ಪರವಾಗಿ ಸಾಕ್ಷಿ ನುಡಿದಿರುತ್ತೇನೆ. ಅದರ ಕಚೇರಿ ಸಹ ಗಂಗೊಳ್ಳಿಯಲ್ಲಿ ಇರುತ್ತದೆ. ಅದು ಸ್ವ ಸಹಾಯ ಸಂಘ ಇರುತ್ತದೆ. ಈ ಪ್ರಕರಣದಲ್ಲಿ ಪರ್ಶಿನ್ ಮೀನುಗಾರ ಸ್ವ ಸ್ವಹಾಯ ಸಂಘ ಕೋಟದ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ಮೀನು ವ್ಯಾಪಾರಕ್ಕೆ ಸಾಲ ಕೊಟ್ಟಿರುತ್ತೇನೆ. ಅದರ ಬಗ್ಗೆ ದೂರಿನಲ್ಲಿ ಯಾವುದೇ ವಿವರಣೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

3. ಯಾವ ರೀತಿಯಲ್ಲಿ ಹಣ ಕೊಟ್ಟಿರುತ್ತೇವೆ ಎಂದು ದೂರನ್ನು ಹಾಗೂ ಪ್ರಮಾಣ ಪತ್ರವನ್ನು ಓದಿ ನೋಡಿದರೆ ಅರ್ಥ ಆಗುವುದಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ದೂರನ್ನು ನಾನು ಓದಿ ನೋಡಿರುತ್ತೇನೆ.ಅದರಲ್ಲಿ ಯಾವ ಅವಧಿಗೆ ಸಾಲ ಕೊಡಲಾಗಿದೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ. ಅದನ್ನು ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿತ ಮುಖ್ಯ ಸಾಲಗಾರನಿರುತ್ತಾನೆ. ನಾಗೇಶ್ ಆರ್ ಕಾಮತ್ ಹಾಗೂ ಪ್ರಕಾಶ್ ಖಾರ್ವಿಯವರು ಜಾಮೀನುದಾರ ಇರುತ್ತಾರೆ. ಈ ಬಗ್ಗೆ ಕರಾರು, ಫಾರಂ ನಂಬ್ರ 2, ಮೀನು ಹಾಗೂ ಮೀನಿನ ಉತ್ಪನ್ನ ಪಡೆಯಲು ನೀಡುವ ಅರ್ಜಿ, ಭದ್ರತೆ ಠೇವಣಿ ಜಮೆ ಮಾಡಿ ಜಾಮೀನು ನೀಡುವುದರ

ಕುರಿತು ದಾಖಲೆಗಳನ್ನು ಮಾಡಿಕೊಂಡಿರುತ್ತೇನೆ. ಬಿಲ್ಲು ಹಾಗೂ ರಶೀದಿಗಳಿಗೆ ಸಹಿ ಮಾಡಲು ಅಧಿಕಾರ ನೀಡುವ ಪತ್ರಗಳನ್ನು ಹಾಗೂ ಕರಾರನ್ನು ಮಾಡಿಕೊಂಡಿರುತ್ತೇನೆ.

4. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಮ್ಮ ತಾವಾದಲ್ಲಿ ಆರೋಪಿಗೆ ಸಂಬಂಧಪಟ್ಟಂತೆ ಸಹಿಗಳು ಯಾವ ಸಂಖ್ಯೆಯಲ್ಲಿ ಇದೆ ಎಂದರೆ ಸಾಕ್ಷಿ ಅಂದಾಜು 10 ರಿಂದ 12 ಇರಬಹುದು ಎಂದು ನುಡಿಯುತ್ತಾರೆ. ಮೀನನ್ನು ಹರಾಜು ಮಾಡುವ ರುತು ಆಗಸ್ಟ್ ರಿಂದ ಪ್ರಾರಂಭವಾಗಿ ಮುಂದಿನ ಮೇ ನಲ್ಲಿ ಅಂತ್ಯ ಕಾಣುತ್ತದೆ. ಈ ವ್ಯವಹಾರ 270 ದಿನಗಳಿಗೆ ಸಂಬಂಧಪಟ್ಟ ವ್ಯವಹಾರ ಆಗಿರುತ್ತದೆ. ಮೋಹನ ಖಾರ್ವಿಯವರು 8 ದಿನಗಳು ವ್ಯವಹಾರ ಮಾಡಿರುತ್ತಾರೆ. ದಿನಾಂಕ 03-09-2017 ರಿಂದ 16-11-2017 ರವರೆಗೆ ವವಹರಿಸಿರುತ್ತಾರೆ. ಅದು ಸಹ ಮತ್ತೊಂದು ಪ್ರಕರಣದಲ್ಲಿ ಸಾಕ್ಷಿ ಹೇಳಿದ್ದು ಸಹ ಇದೆ ರುತುವಿಗೆ ಸಂಬಂಧಪಟ್ಟಂತೆ. ಆ ಪ್ರಕರಣದಲ್ಲಿ ಸಾಲಗಾರರುಮೋಹನ್ ಖಾರ್ವಿ, ಜಾಮೀನುದಾರರು ನಾಗೇಶ್ ಆರ್ ಕಾಮತ್ ಹಾಗೂ ಪ್ರಕಾಶ್ ಖಾರ್ವಿಯವರು. ಚೆಕ್ ನ್ನು ದುರುಪಯೋಗ ಮಾಡಿ 2 ಪ್ರಕರಣ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷ ಆ ಸಂಸ್ಥೆ ಬೇರೆ ಈ ಸಂಸ್ಥೆ ಬೇರೆ ಎಂದು ನುಡಿಯುತ್ತಾರೆ.

5. ನಾನು ಆ ಸಂಸ್ಥೆಯಲ್ಲಿ ವ್ಯವಸ್ಥಾಪಕ ಈ ಸಂಸ್ಥೆಯಲ್ಲಿ ಪ್ರಭಾರ ವ್ಯವಸ್ಥಾಪಕ. ನಮ್ಮದು ಪೂರ್ಣಕಾಲಿನ ಕೆಲಸ ಇರುತ್ತದೆ. ಮೋಹನ್ ಖಾರ್ವಿಯವರ ದಾಖಲೆಗಳನ್ನು ಕಾಪಾಡಿಕೊಳ್ಳುವ ಜವಬ್ದಾರಿ ಸಿಬ್ಬಂದಿ ಹಾಗೂ ನನ್ನ ಮೇಲೆ ಇರುತ್ತದೆ. 9 ದಿನಗಳ ಕಾಲ ವ್ಯವಹಾರ ಮಾಡಿದ ಬಗ್ಗೆ ರಶೀದಿ ಹಾಗೂ ಬಿಲ್ಲುಗಳು ಇರುತ್ತವೆ. ಆ ಬಿಲ್ಲುಗಳನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ಅವರುಗಳ ಹೆಸರುಗಳು ಸಂತೋಷ, ಅಂಬಿಕಾ ಹಾಗೂ ನಾನು ಇರಬಹುದು. ಯಾವ ಯಾವ ದಿನ ಯಾರು ಬಿಲ್ಲು ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಆ ಬಿಲ್ಲುಗಳು ಸಂಸ್ಥೆಯಲ್ಲಿರುತ್ತದೆ. ಆ 9 ರಶೀದಿಗಳಲ್ಲಿ ಮೋಹನ್ ಖಾರ್ವಿಯವರ ಹೆಸರು ಇರಬಹುದು. ಅವು ಯಾವಾ ಕಾಲಿನ ರಶೀದಿ ಹಾಗೂ ಎಷ್ಟು ಮೊಬಲಗುವಿನದು ಎಂದು ದಾಖಲೆ ನೋಡಿ ಹೇಳಬೇಕು. 9 ದಿನಗಳ ವ್ಯವಹಾರ ಹಾಗೂ ಬಡ್ಡಿಯನ್ನು ಸೇರಿಸಿ ಈ ಚೆಕ್ ನ್ನು ಹಾಜರುಪಡಿಸಿರುತ್ತೇನೆ. 8 ದಿನಗಳ ವ್ಯವಹಾರದ ಮೊತ್ತ 6,23,332/-ಅಸಲು ಇರುತ್ತದೆ. ಬಡ್ಡಿ 3,28,914/- ರೂ. ಇರುತ್ತದೆ. 12 ಪರ್ಸೆಂಟ್ ಬಡ್ಡಿ ಇರುತ್ತದೆ.

6. ನಾನು ಹೇಳುವ 8 ರಶೀದಿಗಳು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿ ಇದೆ ಎಂದು ಅನುಕೂಲಕರವಾದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ಅಮಾನ್ಯದ ನೋಟಿಸು ಬಿಟ್ಟು ಬೇರೆ ನೋಟಿಸು ಕೊಟ್ಟಿರುವುದಿಲ್ಲ. ಒಬ್ಬ ವ್ಯಕ್ತಿ 2

ಸಂಸ್ಥೆಯಲ್ಲಿ ಪೂರ್ಣಕಾಲಿನ ಉದ್ಯೋಗಿಯಾಗಿರಲು ಸಾಧ್ಯ ಇರುವುದಿಲ್ಲ ಎಂದರೆ ಸಾಕ್ಷಿ ಎರಡು ಸಂಸ್ಥೆ ಒಂದೇ ಕಚೇರಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು 2 ಸಂಸ್ಥೆ ಗಳಲ್ಲಿ ಒಂದರಲ್ಲಿ ವ್ಯವಸ್ಥಾಪಕ ಹಾಗೂ ಮತ್ತೊಂದರಲ್ಲಿ ಪ್ರಭಾರ ವ್ಯವಸ್ಥಾಪಕ ಎಂದು ಕೆಲಸ ಮಾಡುವುದರ ಬಗ್ಗೆ ದಾಖಲೆ ಇರುತ್ತದೆ. ಆರೋಪಿಯ ವಿಧ್ಯಾಭ್ಯಾಸ ಎಷ್ಟು ಎಂದು ಗೊತ್ತಿರುವುದಿಲ್ಲ. ಅವರಿಗೆ ಇಂಗ್ಲೀಷ್ ನಾಲೇಜ್ ಇದ್ದ ಬಗ್ಗೆ ಗೊತ್ತಿರುವುದಿಲ್ಲ. ಚೆಕ್ ನಲ್ಲಿರುವ ಕೈ ಬರಹ ಯಾರದ್ದು ಎಂದರೆ ಸಾಕ್ಷಿ ಅವರೇ ಬರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆರೋಪಿಯ ಖಾಲಿ ಚೆಕ್ ನ್ನು ದುರುಪಯೋಗ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ಸಂಸ್ಥೆ ಯಲ್ಲಿ ಕೊಟ್ಟಂತಹ ಚೆಕ್ ನ್ನು ಇನ್ನೊಂದು ಸಂಸ್ಥೆ ಯಲ್ಲಿ ಹಾಕಿರುತ್ತೇನೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನಾನು ಸಾಕ್ಷಿ ಹೇಳಿದ ಮತ್ತೊಂದು ಪ್ರಕರಣದಲ್ಲಿ ಕೆನರಾ ಬ್ಯಾಂಕ್ ಗಂಗೊಳ್ಳಿ ಶಾಖೆಯ ಚೆಕ್ ಯೇ ಇರುತ್ತದೆ. ಅದರ ಚೆಕ್ ನಂಬ್ರ ಗೊತ್ತಿರುವುದಿಲ್ಲ.

ಈ ಸಂದರ್ಭದಲ್ಲಿ ಆರೋಪಿ ಪರ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ** ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ **(C/c)**